

**ಕವಿತೆ**




## ಚಿನ್ಮಯ ಹೆಗಡೆ

ಕಲೆ: ಸೃಜನ್


# ಕವಿತೆಗಳು

1
ಕುರ್ಚಿ ಕೆತ್ತಿದವ
ಇಲ್ಲ.

ಕೆತ್ತಿಸಿದವ
ಇಲ್ಲ.

ಕೂತು
ಎದ್ದು ಹೋದವ
ಇಲ್ಲ.

ನೆಲ ಒರೆಸಲು
ಕುರ್ಚಿ ಸರಿಸುವಾಗ
ಹೀಗೆಲ್ಲ...

2
ಸಂತೆಯಿಂದ
ಅಪ್ಪ ತಂದ
ಕ್ಯಾಲಿಫ್ಲವರಿನಲ್ಲಿ
ಬಿಳೀ ಹುಳ.

ಉಂಡು ತಿಂದು
ಮನೆ ಕಟ್ಟಿಕೊಂಡು
ಮಧ್ಯ ವಯಸ್ಸಿನ
ಮಧ್ಯಾಹ್ನ
ಮಲಗಿದ್ದಾಗ
ಆದರ ನೆನಪು.

3
ಕ್ಯಾಶ್ ಕೌಂಟರಿನಲ್ಲಿ
ರಾಶಿ ರಾಶಿ
ನೋಟು ಎಣಿಸುವಾಗ
ಬಡತನ
ಸಾಲ
ನಿರುದ್ಯೋಗ
ವಲಸೆ
ಹಸಿವು
ಸಾವು
ಬೂದಿ...

ಲೆಕ್ಕ
ತಪ್ಪಿತು.

4.
ಪೈಪು ಹುಗಿಯಲು
ನೆಲ ಅಗೆವವನ
ಊರು
ಓಣಿ
ಕನಸು
ಸಂಸಾರ
ಹೇಗಿದ್ದಿರಬಹುದು?

ಈ ಪೈಪು
ಅವನನ್ನು
ಎಲ್ಲಿಗೆ ತಲುಪಿಸಬಹುದು?

5.
ಟೇಬಲ್ಲಿನ ಮೇಲೆ
ಕೂತ ಪುಸ್ತಕ
ಕೈ ತೋರಿಸಿತು.

ಕಿಟಕಿ ಪಾಗಾರ
ಸರ್ವೆನಂಬರು
ಭೂಪಟ
ದಾಟಿ
ಹೊರಟುಬಿಟ್ಟೆ.




Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220,


© All rights reserved. Reproduction in whole or in part without permission is prohibited.


RNI No 17129/68